ಸರ್ಕಾರದವರು ಇದರ ಬಗ್ಗೆ ಯಾವ ನಿಲುವನ್ನು ತೆಗೆದುಕೊಂಡಿದ್ದಾರೆ ಎಂಬುದನ್ನು ತಿಳಿಸುವರೇ ? ಬಿ.ಇ ಎಂ.ಎಲ್. ನೌಕರರು ಮತ್ತು ವಿಜ್ಞಾನ ಇಂಡಸ್ಟ್ರೀಸ್ ನೌಕರರು ಎಂಬ ತಾರತಮ್ಯವಿದ್ದು ಅದನ್ನು ಬಗೆಹರಿಸುವಲ್ಲಿ ಏನು ಕ್ರಮ ತೆಗೆದುಕೊಂಡಿದ್ದೀರಿ ? ಈ ಒಂದು ನ್ಯಾಯಯುತವಾದ ಬೇಡಿಕೆಯನ್ನು ಆಡಳಿತ ವರ್ಗದ ಮುಂದೆ ಇಟ್ಟಾಗ ನೌಕರರ ವರ್ಗದವರನ್ನು ಅಮಾನತ್ತಿನಲ್ಲಿಡುವುದು ಅವರಿಗೆ ಬೆದರಿಕೆ ಕೊಡುವುದು ಸರ್ವೇ ಸಾಮಾನ್ಯವಾಗಿ ನಿರಂತರವಾಗಿ ಬೆಳೆದು ಬಂದ ದಾರಿಯಾಗಿದೆ. ಕಾರ್ಮಿಕರ ಹಿತರಕ್ಷಣೆಯನ್ನು ಕಾಪಾಡುವಲ್ಲಿ ಸರ್ಕಾರದವರ ಗಮನವನ್ನು ಸೆಳೆಯಲು ಅನೇಕ ಸಾರಿ ಪ್ರಯತ್ನಿಸಿದರೂ ಸಹ ಇದರ ಬಗ್ಗೆ ಯಾವ ಪರಿಹಾರವೂ ದೊರಕಿಲ್ಲ. ಆದ್ದರಿಂದ ಈ ಸಮಸ್ಯೆಯನ್ನು ಕಾರ್ಮಿಕ ಸಚಿವರ ಗಮನಕ್ಕೆ ತಂದು, ಅವರ ಗಮನವನ್ನು ಸೆಳೆಯಬಯಸುತ್ತೇನೆ.

ಶ್ರೀ ಜೆ. ಎಚ್. ಪಟೇಲ್.—ಮಾನ್ಯ ಅಧ್ಯಕ್ಷರೇ, ಈ ವಿಜ್ಞಾನ್ ಇಂಡಸ್ಟ್ರೀಸ್‌ನ್ನು ಈ ಹಿಂದೆಯೇ ರಾಜ್ಯ ಸರ್ಕಾರದ ರಿಲೀಫ್ ಅಂಡರ್ ಟೇಕಿಂಗ್ ಆಕ್ಟ್ ಪ್ರಕಾರ ತೆಗೆದುಕೊಂಡು ಬಿ.ಇ.ಎಂ ಎಲ್. ಸಂಸ್ಥೆಗೆ ಪಹಿಸಿಕೊಟ್ಟಿದ್ದೇವೆ. ಆದ್ದರಿಂದ ಇದರ ಉಸ್ತುವಾರಿ ಬಿ.ಇ.ಎಂ ಎಲ್. ಸಂಸ್ಥೆಗೆ ಸೇರಿದ್ದಾಗಿದೆ. ಈಗ ರಾಜ್ಯ ಸರ್ಕಾರಕ್ಕೂ ಇದಕ್ಕೂ ಯಾವ ಸಂಬಂಧವೂ ಇಲ್ಲ. ಆದರೂ ಸಹ ಅಲ್ಲಿನ ವ್ಯವಸ್ಥಾಪಕರಿಗೆ ಆದಷ್ಟು ಬೇಗ ಅಲ್ಲಿನ ಕಾರ್ಮಿಕರಿಗೆ ಸಂಬಳ ಕೊಡಬೇಕೆಂದು ಆದೇಶ ಕೊಡುತ್ತೇವೆ.

ಶ್ರೀ ಜಿ. ಎಸ್. ಆಚಾರ್.—(ಸದಸ್ಯರು ಹಾಜರಿಲ್ಲ).

ಶ್ರೀ ಪ್ರತಾಪಚಂದ್ರಶೆಟ್ಟಿ.—(ಸದಸ್ಯರು ಹಾಜರಿಲ್ಲ).

೯. ಬೆಂಗಳೂರು ನಗರದ ಮಂರ್ಫಿಟೌನಿನ ನಾಲಾ ರೋಡಿನಲ್ಲಿ ೯ ಗುಡಿಸಲುಗಳು ಸುಟ್ಟು ಹೋಗಿರುವುದು.

ಶ್ರೀ ಕೆ. ಜೆ. ಜಾರ್ಜ್.—ಮಾನ್ಯ ಅಧ್ಯಕ್ಷರೇ, ದಿನಾಂಕ ೨೯-೩-೧೯೮೭ರಂದು ರಾತ್ರಿ ೧೧-೩೦ ಗಂಟೆಯಲ್ಲಿ ನಗರದ ಮಂರ್ಫಿಟೌನಿನ ನಾಲಾ ರೋಡಿನಲ್ಲಿ ೯ ಗುಡಿಸಲುಗಳು ಬೆಂಕಿ ಅನಾಹುತಕ್ಕೆ ಈಡಾಗಿ ಸುಟ್ಟು ಹೋಗಿದ್ದು ಅವರ ಆಸ್ತಿಪಾಸ್ತಿಗೂ ಪೂರ್ಣವಾಗಿ ನಷ್ಟ ಸಂಭವಿಸಿದೆ. ಅಲ್ಲದೆ ಅವರು ನಿರ್ವಸಿತರೂ, ನಿರ್ಗತಿಕರೂ ಆಗಿದ್ದಾರೆ. ಸದರಿ ನಿರ್ವಸಿತರಿಗೆ ಅವರಿಗುಂಟಾಗಿರುವ ನಷ್ಟದ ಬಗ್ಗೆ ಪೂರ್ಣ ಪರಿಹಾರ ದೊರಕಿಸಿ ಕೊಡುವುದಲ್ಲದೆ ತಕ್ಷಣ ಮುಖ್ಯಮಂತ್ರಿಗಳ ಪರಿಹಾರ ನಿಧಿಯಿಂದ ಪರಿಹಾರವನ್ನೊದಗಿಸುವಂತೆ ನಗರಾಭಿವೃದ್ಧಿ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ. ಎ. ಲಕ್ಷ್ಮೀಸಾಗರ್. ಇದರ ಬಗ್ಗೆ ವಿಚಾರಣೆ ಮಾಡಿ ಮುಂದಿನ ಕ್ರಮ ಕೈಕೊಳ್ಳುತ್ತೇನೆ. ಮಾನ್ಯ ಸದಸ್ಯರು ಇದರ ಬಗ್ಗೆ ವಿವರಗಳನ್ನು ಕೊಟ್ಟರೆ ನನಗೆ ವಿಚಾರಣೆ ಮಾಡಲು ಅನುಕೂಲವಾಗುತ್ತದೆ,

೧೦ ಉಡುಪಿಯ ಬಸ್‌ನಿಲ್ದಾಣದ ಹೋಟೆಲಿನ ಕೊಳಕು ನೀರಿನ ದುರ್ವಾಸನೆಯಿಂದ ಪರಿಸರಮಾಲಿನ್ಯವಾಗುವುದು

ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಮಾನ್ಯ ಅಧ್ಯಕ್ಷರೆ, ಉಡುಪಿ ಪುರಸಭೆ ಮಂಗಳೂರು ವಿಭಾಗದ ಪುರಸಭೆಗಳ ಪೈಕಿ ಅತ್ಯುತ್ತಮ ಪುರಸಭೆ ಎಂದು ಪ್ರಶಸ್ತಿಗಳಿಸಿದೆ. ಆದರೆ ಈ ಪ್ರಶಸ್ತಿಗೆ ಕಳಂಕವೋ ಎನ್ನುವಂತೆ ಉಡುಪಿಯ ಬಸ್ ನಿಲ್ದಾಣದ ಹೋಟೆಲಿನಿಂದ ಹೊರಡುವ ದುರ್ವಾಸನೆಯ ನೀರು ಸಾರ್ವಜನಿಕ ಮೂತ್ರಿಯಿಂದ ಹೊರಡುವ ಮೂತ್ರದೊಂದಿಗೆ ಚರಂಡಿಗೆ ಸೇರಿ ಮೂಡನಿಡಂಬೂರಿನವರೆಗೆ ಹರಿದು ಅಲ್ಲಿ ನಿಂತು ಕೊಳಕು ದ್ರವವಾಗಿ ಬಹಳ ದುರ್ವಾಸನೆಯಿಂದ ಕೂಡಿ ಪರಿಸರ ಮಾಲಿನ್ಯಕ್ಕೆ ಕಾರಣವಾಗಿದೆ. ಅಲ್ಲದೆ ಆ ಚರಂಡಿಯ ಅಕ್ಕ ಪಕ್ಕದ ಬಾವಿಗಳ ನೀರೂ ಸಹ ಇದರಿಂದ ಕಲುಷಿತವಾಗಿದ್ದು ಗಂಡಾಂತರ ತರುವಂತಹದ್ದಾಗಿದೆ. ಈ ಬಗ್ಗೆ ಪುರಸಭೆಯವರಿಗೆ ಹಲವಾರು ದೂರುಗಳು ಬಂದಿದ್ದು ಪುರಸಭೆಯವರು ಇದನ್ನು ಗಂಭೀರವಾಗಿ ಪರಿಗಣಿಸದೆ ಸೂಕ್ತ ಕ್ರಮ ಕೈಕೊಳ್ಳದೆ ಪೊಳ್ಳು ಆಶ್ವಾಸನೆಗಳನ್ನು ನೀಡಿ ಕಾಲ